**<u>ದಿ:31.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲು: ವಾದಿ ಪರ ವಕೀಲರಿಂದ:</u>**

1. ನಾನು ಪಳಂಗೇಟಿರ ಕುಟುಂಬಕ್ಕೆ ಸೇರಿದ ಸದಸ್ಯನಾಗಿರುತ್ತೇನೆ ಎಂದರೆ ಸರಿ. ನಮ್ಮ ಪಳಂಗೇಟಿರ ಕುಟುಂಬದಲ್ಲಿ ಮೂರು ಭಾಗ ಇದೆ. ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಎಷ್ಟು ಬಾಣೆ ಜಾಗ ಮತ್ತು ಗದ್ದೆ ಇದೆ ಎಂದು ನಿಖರವಾಗಿ

ಹೇಳಲು ಆಗುವುದಿಲ್ಲ. ನನ್ನ ಭಾಗಕ್ಕೆ ಎಷ್ಟು ಬಾಣೆ ಜಾಗ ಮತ್ತು ಗದ್ದೆ ಇದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನನಗೆ ಮತ್ತು ನನ್ನ ತಂದೆಯವರಿಗೆ ಬಾಣೆ ಮತ್ತು ಸಾಗು ಜಾಗ ಇದೆ. ಬಾಣೆ ಮತ್ತು ಸಾಗು ಜಾಗ ನನ್ನ ಅಜ್ಜನಿಂದ ನನ್ನ ತಂದೆಗೆ ಮತ್ತು ನನ್ನ ತಂದೆಯಿಂದ ನನಗೆ ಬಂದಿರುತ್ತದೆ. ಸದರಿ ಬಾಣೆ ಮತ್ತು ಸಾಗು ಜಾಗ ನನ್ನ ಅಜ್ಜನಿಗೆ ಹೇಗೆ ಬಂದಿರುತ್ತದೆ ಎಂದು ಹೇಳಲು ನನಗೆ ಗೊತ್ತಾಗುವುದಿಲ್ಲ.

2. ದಾವಾ ಎ ಶೆಡ್ಯೂಲ್ ಆಸ್ತಿ ಮೂಲತಃವಾಗಿ ನನ್ನ ಅಜ್ಜನಿಗೆ ಬಂದಿರುತ್ತದೆ ಆದರೆ ಹೇಗೆ ಬಂದಿರುತ್ತದೆ ಎಂದು ಹೇಳಲು ನಿಖರವಾಗಿ ಗೊತ್ತಿಲ್ಲ. ದಾವಾ ಎ ಶೆಡ್ಯೂಲ್ ಆಸ್ತಿ ವಾದಿಯವರ ಅಜ್ಜನಾದ ಚಂಗಪ್ಪ ಅಲಿಯಾಸ್ ಅಯ್ಯಪ್ಪರವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮನೆದಳಕ್ಕಾಗಿ ಸದರಿಯವರು ಕುಟುಂಬದ ಹಿರಿಯರಾದ ಕಾರಣದಿಂದ ಮಂಜೂರು ಆಗಿರುತ್ತದೆ ಎಂದು ನುಡಿಯುತ್ತಾರೆ.

3. ವಾದಿಯವರ ಅಜ್ಜ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಂಗಪ್ಪ ಅಲಿಯಾಸ್ ಅಯ್ಯಪ್ಪರವರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವಾಗ ದಾವಾ ಎ ಶೆಡ್ಯೂಲ್ ಆಸ್ತಿಯನ್ನು ಸರ್ಕಾರದಿಂದ ತಮ್ಮ ಹೆಸರಿನಲ್ಲಿ ಮಂಜೂರು ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಎ ಶೆಡ್ಯೂಲ್ ಆಸ್ತಿಯನ್ನು ವಾದಿಯವರ ಅಜ್ಜ ಚಂಗಪ್ಪ ಅಲಿಯಾಸ್ ಅಯ್ಯಪ್ಪರವರು ತಮ್ಮ ಸ್ವಂತ ಆಸ್ತಿಯಾಗಿ ಮಂಜೂರು ಮಾಡಿಸಿಕೊಂಡಿದ್ದರಿಂದ ಅವರ ಕಾಲಾನಂತರ ವಾದಿಯವರ ತಂದೆಗೆ ಆಸ್ತಿ ಬಂದಿದ್ದು ನಂತರದಲ್ಲಿ ವಾದಿಯವರಿಗೆ ಬಂದಿರುತ್ತದೆ

ಎಂದರೆ ಸರಿ.

4. ದಾವಾ ಎ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆಯವರು ಅಕ್ರಮ ಪ್ರವೇಶ ಮಾಡಿದುದರಿಂದ ವಾದಿಯವರು ನ್ಯಾಯಾಲಯದಲ್ಲಿ ನನ್ನ ತಂದೆಯ ವಿರುದ್ಧ ದಾವೆಯನ್ನು ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಅಕ್ರಮ ಪ್ರವೇಶ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ವಾದಿಯವರು ನನ್ನ ವಿರುದ್ಧ ಕೂಡಾ ಓಎಸ್ 78/2010 ದಾವೆಯನ್ನು ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾವೆ ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನನ್ನ ತಮ್ಮನಾದ ಚಂಗಪ್ಪರವರ ಸಾಕ್ಷ್ಯ ವಿಚಾರಣೆ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಮ್ಮನಾದ ಚಂಗಪ್ಪರವರು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ವಂಶವೃಕ್ಷವನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿ. ಸದರಿ ವಂಶವೃಕ್ಷವನ್ನು ದಾವೆಯಲ್ಲಿ ನಿಡಿ-30 ಎಂದು ಗುರುತಿಸಲಾಗಿರುತ್ತದೆ ಎಂದರೆ ಸರಿ.

5. ನಿಡಿ-30 ವಂಶವೃಕ್ಷದ ಪ್ರಕಾರ ನಾನು ನಂಜಪ್ಪರವರ ಭಾಗಕ್ಕೆ ಸೇರಿದ ಸದಸ್ಯನಾಗಿರುತ್ತೇನೆ ಎಂದರೆ ಸರಿ. ಅದೇ ರೀತಿ ವಾದಿಯವರು ಮೇದಪ್ಪ ಎಂಬುವವರ ಭಾಗಕ್ಕೆ ಸೇರಿದ ಸದಸ್ಯರಾಗಿರುತ್ತಾರೆ ಎಂದರೆ ಸರಿ. ನಾನು ವಾದ ಪತ್ರದಲ್ಲಿ ದಾವಾ ಎ ಶೆಡ್ಯೂಲ್ ಆಸ್ತಿ ವಿಲೀನ ಆಗಿರುತ್ತದೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಅದೇ ರೀತಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಎ ಶೆಡ್ಯೂಲ್ ಆಸ್ತಿ ಪಾಲುಪಾರಿಕತ್ತಿನಲ್ಲಿ ಬಂದಿರುವಂತಹ ಆಸ್ತಿ ಎಂದು ತಿಳಿಸಿರುತ್ತೇನೆ ಎಂದರೆ ಸರಿ . ನಿಡಿ-3 ಪಾಲುಪಾರಿಕತ್ತಿನಲ್ಲಿ ನಮ್ಮ ಕುಟುಂಬದ ಮೂರು ಜನ ಸದಸ್ಯರು ಮಾತ್ರ ಸಹಿ ಮಾಡಿರುತ್ತಾರೆ ಎಂದರೆ ಸರಿ . ನಿಡಿ-3 ಪಾಲುಪಾರಿಕತ್ತಿನಲ್ಲಿ

ದಾವಾ ಎ ಶೆಡ್ಯೂಲ್ ಆಸ್ತಿಯ ಬಗ್ಗೆ ತಿಳಿಸಿದ್ದರೂ ಕೂಡಾ ಸದರಿ ಆಸ್ತಿಯ ವಿಸ್ತೀರ್ಣದಲ್ಲಿ ವ್ಯತ್ಯಾಸ ಇದೆ ಎಂದರೆ ಸುಳ್ಳು. ನಿಡಿ-3 ಪಾಲುಪಾರಿಕತ್ತನ್ನು ಕಾನೂನಿನ ಪ್ರಕಾರ ಮಾಡಿಕೊಂಡಿರುವ ದಾಖಲೆ ಆಗಿರುವುದಿಲ್ಲ ಮತ್ತು ಆ ಸಮಯದಲ್ಲಿ ನಮ್ಮ ಕುಟುಂಬದ ಎಲ್ಲಾ ಸದಸ್ಯರು ಭಾಗಿಯಾಗಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-3 ದಾಖಲೆಯಲ್ಲಿ ನಮ್ಮ ಒಟ್ಟು ಕುಟುಂಬದ ಎಲ್ಲಾ ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದರೆ ಸರಿ.

6. ಓಎಸ್ 78/2010 ದಾವೆಯನ್ನು ದಾಖಲಿಸುವ ಸಮಯದಲ್ಲಿ 1 ಮತ್ತು 3 ನೇ ವಾದಿಯವರು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. ಈಗಲೂ ಕೂಡಾ ಸದರಿಯವರು ಬೆಂಗಳೂರು ಮತ್ತು ಮಂಗಳೂರಿನಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಓಎಸ್ 78/2010 ದಾವೆ ವಾದಿಯವರ ಪರ ತೀರ್ಪು ಆಗಿದ್ದು ಅದನ್ನು ಪ್ರಶ್ನಿಸಿ ಮೇಲ್ಮನವಿಯನ್ನು ನಾವು ಸಲ್ಲಿಸಿದ ಸಮಯದಲ್ಲಿ ದಾವಾ ಬಿ ಶೆಡ್ಯೂಲ್ ಆಸ್ತಿಯನ್ನು ನಾವು ಒತ್ತುವರಿ ಮಾಡಿಕೊಂಡು ಅಕ್ರಮ ಸ್ವಾಧೀನ ಹೊಂದಿರುತ್ತೇವೆ ಎಂದರೆ ಸುಳ್ಳು. ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ನಾವು ಈಗ ಭತ್ತದ ಕಣ ಮತ್ತು ದನದ ಕೊಟ್ಟಿಗೆ ಕಟ್ಟಿರುತ್ತೇವೆ ಎಂದರೆ ಸುಳ್ಳು. ನಾವು ದಾವಾ ಬಿ ಶೆಡ್ಯೂಲ್ ಆಸ್ತಿಯಲ್ಲಿ ಭತ್ತದ ಕಣ ಮತ್ತು ದನದ ಕೊಟ್ಟಿಯನ್ನು ಕಟ್ಟಿದ್ದರೂ ಕೂಡಾ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆಸುಳ್ಳು. ದಾವಾ ಎ ಶೆಡ್ಯೂಲ್ ಆಸ್ತಿ ಚಂಗಪ್ಪ ಅಲಿಯಾಸ್ ಅಯ್ಯಪ್ಪರವರ ಸ್ವಂತ ಆಸ್ತಿಯಾಗಿರುವ ಕಾರಣದಿಂದ ಅವರ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಸೇರಿದ ಆಸ್ತಿಯಾಗಿರುತ್ತದೆ ಹೊರತು ಕುಟುಂಬದ ಇತರೆ ಸದಸ್ಯರು ಅಥವಾ ಪ್ರತಿವಾದಿಯವರಿಗೆ ಸೇರಿದ ಆಸ್ತಿಯಾಗಿರುವುದಿಲ್ಲ ಎಂದರೆ ಸುಳ್ಳು. ದಾವಾ ಎ ಶೆಡ್ಯೂಲ್ ಆಸ್ತಿಗೆ ವಾದಿಯವರು

ಮಾತ್ರ ಹಕ್ಕುದಾರರಾಗಿರುತ್ತಾರೆ ಎಂದರೆ ಸುಳ್ಳು. ವಾದಿಯವರಿಗೆ ಸೇರಿದ ದಾವಾ ಎ ಶೆಡ್ಯೂಲ್ ಆಸ್ತಿಯನ್ನು ಮೋಸದಿಂದ ಲಪಟಾಯಿಸುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್. ಬಿ. ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.